Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 40/2016

ಪ್ರಾ.ಸಾ. 1 ಚಾ.ಸಾ. 64

| | | |
|---|---|---|
| ಹೆಸರು | : | ಜಗದೀಶ |
| ತಂದೆಯ ಹೆಸರು | : | ಚನ್ನಪ್ಪ ಹಂಚನಾಳ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಪೊಲೀಸ ಇನ್ಸಪೇಕ್ಟರ ಭಧ್ರಾವತಿ ಗ್ರಾಮೀಣ |
| ವಾಸ | : | ಭಧ್ರಾವತಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 21-02-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಅಗಸ್ಟ 2011 ರಿಂದ ಅಕ್ಟೋಬರ 2013ರ ವರೆಗೆ ಯಾದಗಿರಿ ಲೋಕಾಯುಕ್ತ ಕಛೇರಿಯಲ್ಲಿ ಪೊಲೀಸ ಇನ್ಸಪೇಕ್ಟರ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 26-08-2013 ರಂದು ನಾನು ಪೊಲೀಸ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ ಯಾದಗಿರಿ ಅವರಿಗೆ ಅಪಾದಿತ ಅಧಿಕಾರಿಯು ಸೇವಾ ಅವಧಿಯಲ್ಲಿ ಗಳಿಸಿದಂತಹ ಅಕ್ರಮ ಆಸ್ತಿಯ ಬಗ್ಗೆ ಒಂದು ಸೊರಸ್ ವರದಿಯನ್ನು ತಯಾರಿಸಿ ಸಲ್ಲಿಸಿದ್ದು ಇರುತ್ತದೆ. ಆದರಲ್ಲಿ ಆಪಾದಿತನ ಸೇವಾ ವಿವರ, ಕೌಟುಂಬಿಕ ವಿವರ, ಸೇವೆ ಸಲ್ಲಿಸಿದ ಜಾಗಗಳ ವಿವರ ಇವುಗಳನ್ನು ನಮೂದಿಸಿದ್ದೇನೆ. ಆತನ ಒಟ್ಟು ಸ್ಥಿರಾಸ್ತಿ, ಚರಾಸ್ತಿ, ಖರ್ಚು, ವೆಚ್ಚಗಳು, 1990 ರಿಂದ 2013ರ ವರೆಗೆ ಆತ ಗಳಿಸಿದ ನ್ಯಾಯುತ ಆದಾಯ ವಿಚಾರ ಮಾಡಿದಾಗ ಆತ ಆದಾಯಕ್ಕಿಂತ ಹೆಚ್ಚು 127 ಶೇಕಡ ರಷ್ಟು ಗಳಿಕೆ ಕಂಡು ಬಂದಿದ್ದರಿಂದ ನಾನು ಒಂದು ವರದಿಯನ್ನು ಎಸ್.ಪಿ. ಅವರಿಗೆ ಕಳುಹಿಸಿದ್ದೆ. ಅದರ ಆಧಾರದ ಮೇಲೆ ಅವರು ಅಂದಿನ ಡಿವೈಎಸಪಿ ನಾಯಕ ಅವರಿಗೆ ದಿಃ 29-08-2013 ರಂದು ಪ್ರಕರಣ ದಾಖಲಿಸಿ ದಾಳಿ ಮಾಡಿ ತನಿಖೆ ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ಈ ಬಗ್ಗೆ ಸೊರಸ್ ವರದಿಯನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಎಸ್.ಪಿ. ಕಮ್ಮಾರ ಅವರ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಡಿವೈಎಸಪಿ ಅವರು ಮಾಡಿದ ನಿರ್ದೇಶನವನ್ನು ನಿ.ಪಿ.2 ಎಂದು ಎಸ್.ಪಿ. ಕಮ್ಮಾರ ಅವರ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಆದೂರಿನ ಆಧಾರದ ಮೇಲೆ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ರವಾನಿಸಿದ್ದು

ಪ್ರ.ವ.ವರದಿಯನ್ನು ನಿ.ಪಿ.೩ ಎಂದು ನಾಯಕ ಅವರ ಸಹಿಯನ್ನು ನಿ.ಪಿ.೩(ಎ) ಮತ್ತು ನಿ.ಪಿ.೩(ಬಿ) ಎಂದು ಗುರುತಿಸಲಾಯಿತು. ಅಂದಿನ ಡಿವೈಎಸಪಿ ನಾಯಕ ಅವರು ನ್ಯಾಯಾಲಯದಿಂದ ಎರಡು ಶೋದನಾ ವಾರಂಟ ಪಡೆದು 4 ಜನ ಪಂಚರನ್ನು ಕರೆಸಿದರು. ನಮ್ಮನ್ನು ಮತ್ತು ಪಂಚರನ್ನು ಠಾಣೆಗೆ ಕರೆಯಿಸಿ ಮಾರನೇ ದಿನ ಬೆಳಿಗ್ಗೆ 5-30 ಗಂಟೆಗೆ ಬರುವಂತೆ ತಿಳಿಸಿದರು. ಡಿವೈಎಸಪಿ ಅವರು ಪಂಚರಿಗೆ ಕೊಟ್ಟ 4 ನೋಟಿಗಳನ್ನು ನಿ.ಪಿ.4 ರಿಂದ 7 ಎಂದು ಅದರಲ್ಲಿರುವ ಡಿವೈಎಸಪಿ ಅವರ ಸಹಿಗಳನ್ನು ನಿ.ಪಿ.4(ಎ) ದಿಂದ ನಿ.ಪಿ.7(ಎ) ಎಂದು ಗುರುತಿಸಲಾಯಿತು. ಬೆಳಿಗ್ಗೆ 5-30 ಗಂಟೆಗೆ ನಾನು ಮತ್ತು ಪಂಚರು ಠಾಣೆಗೆ ಹಾಜರಾದೆವು. ನನಗೆ ಒಂದು ಶೋದನಾ ವಾರಂಟನ್ನು ಕೊಟ್ಟು ಇಬ್ಬರು ಪಂಚರಾದ ಚನ್ನಬಸಪ್ಪ ಮತ್ತು ಚನ್ನಯ್ಯ ಸ್ವಾಮಿ ಅವರನ್ನು ನನಗೆ ಕೊಟ್ಟರು. ನನಗೆ ಕೊಟ್ಟ ಸೋದನಾ ವಾರಂಟನ್ನು ನಿ.ಪಿ.೮ ಎಂದು ಗುರುತಿಸಲಾಯಿತು. ಶೋಧನಾ ವಾರಂಟ ಪ್ರಕಾರ ಇಬ್ಬರು ಪಂಚರನ್ನು ಕರೆದುಕೊಂಡು ನಮ್ಮ ಸಿಬ್ಬಂದಿಯೊಂದಿಗೆ ಬೆಳಿಗ್ಗೆ ೨-00 ಗಂಟೆಗೆ ಜಿಲ್ಲಾ ಯೋಜನಾ ಶಾಖೆ ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಛೇರಿಗೆ ಹೋದೆವು. ಕೋಶಾಧ್ಯಕ್ಷರು ಜಿಲ್ಲಾ ಯೋಜನಾ ಶಾಖೆಗೆ ಹೋಗಿ ಅಲ್ಲಿ ಒಬ್ಬರು ಎಫ್.ಡಿ.ಸಿ. ಪ್ರಕಾಶ ಇದ್ದು ಅವರಿಗೆ ಆಪಾದಿತ ಅಧಿಕಾರಿಯ ಹೆಸರು ಹೇಳಿ ಅವರ ಎಲ್ಲಿದ್ದಾರೆ ಎಂದು ವಿಚಾರಿಸಿದೆವು ಅವರು ಕರ್ತವ್ಯದ ಮೇಲೆ ಬೆಂಗಳೂರಿಗೆ ಹೋಗಿದ್ದಾರೆ ಎಂದು ಹೇಳಿದರು. ಆಗ ನಮ್ಮಗಳ ಪರಿಚಯ ಮಾಡಿಕೊಂಡು ಕಛೇರಿ ಶೋದನೆಗೆ ಬಂದಿದ್ದೇವೆ ಎಂದು ಹೇಳಿ, ನಮ್ಮಗಳ ಅಂಗಶೋಧನೆ ಮಾಡಿಕೊಂಡೆವು. ಕಛೇರಿ ಚಾವಿ ನಮ್ಮ ಬಳಿ ಇಲ್ಲ ಎಂದು ಆಪಾಧಿತ ಅಧಿಕಾರಿಗೆ ಫೋನ್ ಮಾಡಿ ಚಾವಿ ಅವರ ಮನೆಯಲ್ಲಿ ಇದೆ ಎಂದು ತಿಳಿದುಕೊಂಡು ನಮ್ಮ ಠಾಣೆಯ ಮುಖ್ಯ ಪೇದೆ ಅವರನ್ನು ಅವರ ಮನೆಗೆ ಕಳುಹಿಸಿ ಕೀ ತರಿಸಿಕೊಂಡು ಬೆಳಿಗ್ಗೆ 10-00 ಗಂಟೆಗೆ ಶೋಧನಾ ಪಾರಂಭ ಮಾಡಿದೆ. ಆ ಕಛೇರಿಯಲ್ಲಿ ಒಟ್ಟು ೩ ಅಲಮಾರಾಗಳು ಇದ್ದವು ಆ ಮೂರು ಅಲಮಾರಾಗಳನ್ನು ತೆಗೆಸಿ ನೋಡಿದಾಗ ಕೇವಲ ಕಛೇರಿ ದಾಖಲೆಗಳು ಮಾತ್ರ ಇದ್ದವು ಆ ಕಾರಣದಿಂದ ನಾವು ಏನನ್ನೂ ಜಪ್ತಿ ಮಾಡಲಿಲ್ಲ. ಆಪಾದಿತ ನೌಕರ ಕುಳಿತುಕೊಳ್ಳುವ ಚೆರ ಪಕ್ಕ ಒಂದು ಡ್ರಾ ಇದ್ದು ಅದನ್ನು ಪಂಚರ ಸಮಕ್ಷಮ ತೆಗೆದು ನೋಡಿದಾಗ ಅದರಲ್ಲಿ ಅಪಾದಿತ ನೌಕರನಿಗೆ ಸಂಬಂಧಪಟ್ಟಂತೆ 6 ದಾಖಲೆಗಳನ್ನು ವಶಕ್ಕೆ ಪಡೆದೆವು.

| | |
|---|---|
| 1) | 6 ಎಲ್.ಐ.ಸಿ. ಪಾಲ್ಸಿ ತುಂಬಿದ ಪ್ರಿಮಿಯಂ ರಸೀದಿಗಳು. |
| 2) | ಒಂದು ವಾಹನದ ದಾಖಲೆ ಒಟ್ಟು ೮ ಪುಟ ಕಾರಿಗೆ ಸಂಬಂಧಪಟ್ಟಿದ್ದು. |
| 3) | ಬಿ.ಆರ್. ಅಂಬೇಡ್ಕರ ಸಂಘಕ್ಕೆ ನೀಡಿದ 2,000/-ರೂ ರಸೀದಿ. |
| 4) | ಕಾರವಿ ಕಂಪ್ಯೂಟರ್ಸ ಕಂಪನಿಯ ಶೇರನ ಡಿವಿಡೆಂಟ |
| 5) | ಸರಕಾರಕ್ಕೆ ಸಲ್ಲಿಸಿದ ಆಸ್ತಿ ಮತ್ತು ದಾಯತ್ವ ಪಟ್ಟಿ 2012-13 ನೇ ತಾಲಿನದು ಒಟ್ಟು 5 ಪುಟಳು. |
| 6) | ೨1 ರಿಂದ ೨೮ ರ ವರೆಗೆ ಅವರು ಸಲ್ಲಿಸಿದ ಸ್ಥಿರಾಸ್ತಿ ಮತ್ತು ಚರಾಸ್ತಿಯ ಪಟ್ಟಿ ಒಟ್ಟು 16 ಪುಟಗಳು. |

ಈ ದಾಖಲೆಗಳನ್ನು ಪಂಚರ ಸಮಕ್ಷಮ  ವಶಕ್ಕೆ ಪಡೆದಿರುತ್ತೇನೆ. ಬೆಳಿಗ್ಗೆ 10-00 ರಿಂದ ಮಧ್ಯಾಹ್ನ 1-30 ಗಂಟೆಯ ವರೆಗೆ ಪಂಚನಾಮೆಯನ್ನು ವಿವರವಾಗಿ ಬರೆದು ಪಂಚರ ಮತ್ತು ಪ್ರಕಾಶ ಅವರ ಸಹಿ ಪಡೆದಿರುತ್ತೇನೆ. ಸದರಿ ಪಂಚನಾಮೆಯನ್ನು ನಿ.ಪಿ.9 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮತ್ತು ವಶಪಡಿಸಿಕೊಂಡ ದಾಖಲೆಗಳನ್ನು ಶೋಧನಾ ವಾರಂಟನೊಂದಿಗೆ ಡಿವೈಎಸಪಿ ನಾಯಕ ಅವರಿಗೆ ಕೊಟ್ಟಿರುತ್ತೇನೆ. ಈಗ ತೋರಿಸಿದ ವಾರಂಟನ್ನು ನಾನು ಹಿಂದಿರುಗಿಸಿದ್ದು ಅದನ್ನು ನಿ.ಪಿ.10 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂಡೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.